MVC No. 185/2012 RW-2

<u>ದಿನಾಂಕ **23.06.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಕೆ ಪಿ ಎಂ ವಕೀಲರಿಂದ ಃ</u>

ನಮ್ಮ ಬಳಿ ಒಂದು ಟ್ರಾಕ್ಟರ್ ಇದೆ. ಲೋಕೇಶ ನನ್ನ ಆಳಿಯ. ಅವರು contract ಕೆಲಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ಟ್ರಾಕ್ಟರ್ ಅನ್ನು ಲೋಕೇಶ ರವರು ಬಳಿಸಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನಾನು RTO ಕಛೇರಿಗೆ ಹೋಗಿಲ್ಲ. ಈ ವ್ಯವಹಾರವನ್ನು ಲೋಕೇಶ ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನಿಆರ್ 4 ರಲ್ಲಿ ಟ್ರಾಕ್ಟರ್ ಮತ್ತು ಟ್ರೈಲರ್ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ಅದು ನಮ್ಮದಲ್ಲ. ಕ್ರಿಮಿನಲ್ ಪ್ರಕರಣ ಸಿ.ಆರ್ ನಂ. 107/2008 ರಲ್ಲಿ ನಾನು Indemnity Bond ಕೊಟ್ಟು ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು ನಾನೇ ಬಿಡಿಸಿಕೊಂಡಿದ್ದೇನೆ ಸುಳ್ಳು. ಅಪಘಾತದ ದಿನ ಲೋಕೇಶ ರವರು ಟ್ರಾಕ್ಟರ್ ನಲ್ಲಿ ಮಣ್ಣು ಮತ್ತು ಮರಳನ್ನು ಸಾಗಿಸುತ್ತಿದ್ದರು ಎಂದರೆ ಸುಳ್ಳು. ಟ್ರಾಕ್ಟರ್ ಗೆ ವಿಮಾ ಪಾಲಿಸಿ ಮಾಡಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಟ್ರಾಕ್ಟರ್ ಗೆ ವಿಮಾ ಪಾಲಿಸಿ ಇಲ್ಲದೇ ಇರುವುದ್ದರಿಂದ ಪರಿಹಾರ ಕೊಡಬೇಕಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.